**<u>ಸಾಕ್ಷಿಯನ್ನು ದಿನಾಂಕಃ 28.04.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜಿ ಎನ್ ಎಸ್ ವಕೀಲರಿಂದಃ</u>**

1. ನನಗೆ ಈ ಪ್ರಕರಣದ ವಿಧ್ಯಮಾನಗಳು ಗೊತ್ತು. ವಾದಿ ನನಗೆ ನಾದಿನಿ ಆಗಬೇಕು. ಅವರು ನನ್ನ ಹೆಂಡತಿಯ ತಂಗಿ. ಪ್ರತಿವಾದಿ ನನ್ನ ಹೆಂಡತಿಯ ಅಣ್ಣ. ವಾದಿ ಗೃಹಿಣಿ ಮತ್ತು ಪಾದಚಾರಿ ರಸ್ತೆಯ ಮೇಲೆ ಬೆಂಗಳೂರಿನಲ್ಲಿ ಕಬಾಬ್ ವ್ಯಾಪಾರವನ್ನು ಸುಮಾರು 20 ವರ್ಷಗಳಿಂದ ಮಾಡುತ್ತಿದ್ದಾರೆ. ಸಾಕ್ಷಿಯು ಮುಂದುವರಿದು ಅವರ ಗಂಡ ಜೀವಂತ ಇದ್ದಾಗ ಅವರ ಮದುವೆ ಪೂರ್ವದಿಂದಲೂ ಆ ರೀತಿ ವ್ಯಾಪಾರ ಮಾಡುತ್ತಿದ್ದರು, ಅವರು ಮೃತ ಪಟ್ಟ ನಂತರ ವಾದಿ ವ್ಯಾಪಾರ ಮಾಡುತ್ತಿದ್ದಾರೆ ಎಂದು ನುಡಿದಿರುತ್ತಾರೆ. ವಾದಿಯು ಅವರ

ಉದ್ಯೋಗವನ್ನು ದಾವೆಯಲ್ಲಿ ಸೇರಿಸಿದ್ದಾರೋ ಇಲ್ಲವೋ ಎಂದು ತಿಳಿದುಕೊಂಡಿಲ್ಲ. ಆ ಬಗ್ಗೆ ನಾನು ವಾದಿಯನ್ನು ಕೇಳಿ ತಿಳಿದುಕೊಂಡಿಲ್ಲ. ವಾದಿಯು ಗೃಹಿಣಿ ಮಾತ್ರ ಆಗಿದ್ದು ಅವರು ಯಾವುದೇ ವ್ಯಾಪಾರ ಮಾಡುತ್ತಿಲ್ಲ ಮತ್ತು ಆ ರೀತಿ ವ್ಯಾಪಾರ ಮಾಡುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರು ಕರೋನ ಬರುವ ಪೂರ್ವದಲ್ಲಿ ವ್ಯಾಪಾರ ಮಾಡುವುದನ್ನು ನಿಲ್ಲಿಸಿದ್ದಾರೆ. ಅವರು ವ್ಯಾಪಾರ ಮಾಡಲು ನಗರ ಸಭೆ ಅಥವಾ ಮಹಾನಗರ ಪಾಲಿಕೆಯಿಂದ ಪರವಾನಿಗೆ ಪಡೆದುಕೊಂಡಿದ್ದಾರಾ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಆ ಬಗ್ಗೆ ನನಗೆ ಕೇಳಿ ತಿಳಿದುಕೊಳ್ಳಲು ತೊಂದರೆ ಇತ್ತಾ ಎಂದರೆ ಅದರ ಅವಶ್ಯಕತೆ ಇಲ್ಲ.

2. ನನಗೆ ಮತ್ತು ಪ್ರತಿವಾದಿಗೆ ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ವಾದಿ ಒಂದು ಕಡೆ, ಪ್ರತಿವಾದಿ ಮತ್ತೊಂದು ಕಡೆ ಎಂದರೆ ಸರಿಯಲ್ಲ. ವಾದಿಯು ಪ್ರತಿವಾದಿಯ ವಿರುದ್ಧ 1ನೇ ಅಪರ ಸಿವಿಲ್ ನ್ಯಾಯಾಲಯ, ಮದ್ದೂರಿನಲ್ಲಿ ಘೋಷಣಾತ್ಮಕ ದಾವೆಯನ್ನು ಅಸಲು ದಾವಾ ಸಂಖ್ಯೆ 474/2019 ಅನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಆ ದಾವೆಯಲ್ಲಿ ವಾದಿಯೇ ಹಾಜರಾಗಿ ಸಾಕ್ಷಿ ವಿಚಾರಣೆ ಮಾಡಿಸಿಕೊಂಡಿದ್ದು, ಪ್ರಮಾಣ ಪತ್ರ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ವಾದಿಯು ಉದ್ದೇಶಪೂರ್ವಕವಾಗಿ ನನ್ನನ್ನು ಮೊಖ್ತ್ಯಾರುದಾರನಾಗಿ ನೇಮಿಸಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಮಗಳ ಮತ್ತು ಮಗನ ಮದುವೆ ಮಾಡಲು , ಜನಗಳಿಂದ ಪಡೆದ ಸಾಲ ತೀರಿಸಲು ಮತ್ತು ಜಮೀನು ಮಟ್ಟ ಮಾಡಲು ಹಣ ಬೇಕು ಎಂದು ವಾದಿಯಿಂದ ಹಣ ತೆಗೆದುಕೊಂಡಿದ್ದರು. ಆ ಬಗ್ಗೆ ಕರಾರು ಪತ್ರದಲ್ಲಿ ಬರೆಸಿಲ್ಲ. ಅದನ್ನು ಬರೆಸಲು ತೊಂದರೆ ಇರಲಿಲ್ಲ. ನಾನು ನಿಪಿಃ1 ರ ಕರಾರು ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿದ್ದೇನೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಯ ನಡುವೆ ಕರಾರಿನ ಮಾತುಕತೆ ಕರಾರು ಆಗುವ ಒಂದು ವಾರದ ಮುಂಚೆ ಪ್ರತಿವಾದಿಯ ಮನೆಯಲ್ಲಿ ಆಗಿತ್ತು. ಆ ಮಾತುಕತೆಗೆ ನಾನು, ಪ್ರತಿವಾದಿ, ನನ್ನ ಅತ್ತಿಗೆ ಶಕುಂತಲಾ ಹಾಗೂ ನನ್ನ ಹೆಂಡತಿ ಪುಟ್ಟಗೌರಮ್ಮ ಸೇರಿದ್ದೆವು. ಕರಾರು ಮಾತುಕತೆಯಲ್ಲಿ ದಾವಾ ಷೆಡ್ಯೂಲ್ ಆಸ್ತಿಗಳನ್ನು ಒಟ್ಟು ರೂ. 5,10,000/- ಕ್ಕೆ ಮಾರಾಟ ಮಾಡಲು ನಿಗಧಿಯಾಯಿತು. ರೂ. 5,00,000/- ಹಣವನ್ನು ಕರಾರು ಪತ್ರದ ನೊಂದಣಿ ದಿನ ಕೊಟ್ಟಿರುತ್ತೇವೆ. ಹಣವನ್ನು ವಾದಿಯು ನನ್ನ ಕೈನಲ್ಲಿ ಕೊಟ್ಟಿದ್ದು ನಾನು ಅದನ್ನು ಎಣಿಸಿ ಪ್ರತಿವಾದಿಗೆ ಕೊಟ್ಟಿರುತ್ತೇನೆ. ಆ

ಹಣವನ್ನು ವಾದಿಯು ಎಲ್ಲಿಂದ ತಂದರು ಎಂಬ ಬಗ್ಗೆ ನಾನು ವಾದಿಯನ್ನು ವಿಚಾರಿಸಲಿಲ್ಲ. ನಾನು ಕೊಟ್ಟ ಹಣ ರೂ. 500/– ಮುಖಬೆಲೆಯದ್ದಾಗಿತ್ತು. ವಾದಿಗೆ ಅಷ್ಟು ಹಣ ಕೊಡುವ ಸಾಮರ್ಥ್ಯ ಇರಲಿಲ್ಲ, ನಾನು ಮತ್ತು ವಾದಿ ಸೇರಿ ದಾಖಲೆಯನ್ನು ಸೃಷ್ಠಿಸಿದ್ದೇವೆ ಎಂದರೆ ಸರಿಯಲ್ಲ.

3. ದಾವಾ ಸ್ವತ್ತು ಈಗ 1 ಗುಂಟೆಗೆ ರೂ. 1 ಲಕ್ಷ ಬೆಲೆ ಬಾಳುತ್ತದೆ ಎಂದರೆ ಸರಿ. ಪ್ರತಿವಾದಿಯು ವಾದಿಗೆ ಆಸ್ತಿಯನ್ನು ಕರಾರು ಮಾಡಿಕೊಟ್ಟು ರೂ. 5 ಲಕ್ಷ ಹಣ ಪಡೆದುಕೊಳ್ಳುವ ದರದು ಮತ್ತು ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಪ್ರತಿವಾದಿಯ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ. ಕರಾರಿನ ಮಾತುಕತೆಯಾದ ದಿನಾಂಕ ನಿಖರವಾಗಿ ಹೇಳಲು ಆಗುವುದಿಲ್ಲ. ವಾದಿಯು ಪ್ರತಿವಾದಿಗೆ ವಕೀಲರ ಮೂಲಕ ದಿಃ 12.12.2019 ರಂದು ಕಳುಹಿಸಿರುವ ನೋಟೀಸನ್ನು ನಾನು ಓದಿ ತಿಳಿದುಕೊಂಡಿಲ್ಲ. ನೋಟೀಸ್ ಕೊಟ್ಟಿರುವ ವಿಷಯ ನನಗೆ ಗೊತ್ತು. ಪ್ರತಿವಾದಿಯು ವ್ಯವಸಾಯದ ಖರ್ಚಿಗಾಗಿ ರೂ. 50 ಸಾವಿರ ಹಣವನ್ನು ವಾದಿಯಿಂದ ಪಡೆದುಕೊಂಡಿದ್ದು, ನಾವು ರೂ. 5 ಲಕ್ಷ ಎಂದು ಹೆಚ್ಚಾಗಿ ಬರೆಸಿದ್ದೇವೆ ಎಂದರೆ ಸರಿಯಲ್ಲ. ನೋಟೀಸ್ ಕೊಟ್ಟ ನಂತರ ಪತ್ರ ಬರೆದುಕೊಡಬೇಕೆಂದು ಪ್ರತಿವಾದಿಯನ್ನು ಪುನಃ ಕೇಳಿಲ್ಲ. ವಾದಿಯ ಆರೋಗ್ಯ ಸರಿ ಇಲ್ಲ ಎಂಬ ಕಾರಣಕ್ಕೆ ಹಾಗೂ ನನ್ನ ಪ್ರಮಾಣ ಪತ್ರ ದಲ್ಲಿ ಹೇಳಿರುವ ಕಾರಣಕ್ಕೆ ಈ ದಾವೆಯಲ್ಲಿ ಸಾಕ್ಷ್ಯ ನುಡಿಯುತ್ತಿದ್ದು, ನನಗೆ ಈ ದಾವೆಯ ಸಂಪೂರ್ಣ ವಿಧ್ಯಮಾನಗಳು ಗೊತ್ತಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ವಕೀಲರು ಮುಂದುವರಿದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.